ಶ್ರೀ ಹೆಚ್. ನಿಂಗಪ್ಪ : ಮಾನ್ಯ ಅಧ್ಯಕ್ಷರೆ ಮಹಿಳೆಯರು ವಿರೋಧ ಮಾಡಿದ ಕಡೆ ಮುಚ್ಚಿಸಲಿ ಎನ್ನುವುದೇ ನಮ್ಮ ಬೇಡಿಕೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಅಧ್ಯಕ್ಷರು : ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಹೆಚ್. ನಿಂಗಪ್ಪ : ಅಲ್ಲ, ನಮ್ಮ ಪ್ರಶ್ನೆ, ಈಗ ನಿಯಮಬದ್ಧವಾಗಿ ಅಂಗಡಿಗಳನ್ನು ತೆರೆದಿರುತ್ತಾರೆ. ಅಲ್ಲಿ ಮಹಿಳೆಯರು ವಿರೋಧ ಮಾಡುತ್ತಿದ್ದಾರೆ. ನಮ್ಮ ಊರಿನಲ್ಲಿ ಸಾರಾಯಿ ಮಾರಾಟ ಮಾಡುವುದು ಬೇಡವೆಂದು ಹೇಳುತ್ತಿದ್ದಾರೆ. ಅಲ್ಲಿ ಏಕೆ ಮುಚ್ಚಿಸಬಾರದು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಆ ರೀತಿ ಒಂದು ಎಕ್ಸ್‌ಪ್‌ಷನಲ್ ಕೇಸ್ ಇದ್ದರೆ, ಖಂಡಿತವಾಗಿಯೂ ಕುಣಿಗಲ್ ತಾಲ್ಲೂಕಿನಲ್ಲಿ ಎಗ್ಜಾಮಿನ್ ಮಾಡಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಆಂಜನೇಯರವರ ಪ್ರಶ್ನೆ ತೆಗೆದುಕೊಳ್ಳುತ್ತೇನೆ. ಉಳಿದವನ್ನು ಆಮೇಲೆ ತೆಗೆದುಕೊಳ್ಳುತ್ತೇನೆ. ಆಂಜನೇಯರವರೇ, ನಿಮ್ಮ ಪ್ರಶ್ನೆ ಕೇಳಿ.

ಆ) ತಡೆಹಿಡಿಯಲಾದ ಪ್ರಶ್ನೆ

ಬೆಂಗಳೂರಿನಲ್ಲಿರುವ ರೇಸ್‌ಕೋರ್ಸ್ ಸ್ಥಳಾಂತರಿಸುವುದು

558(6286) ಶ್ರೀ ಆಂಜನೇಯ ಹೆಚ್. (ಭರಮಸಾಗರ) : ಮಾನ್ಯ ಲೋಕೋಪಯೋಗಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಹೃದಯ ಭಾಗದಲ್ಲಿರುವ ರೇಸ್ ಕೋರ್ಸ್ ಜಮೀನು ಯಾರಿಗೆ ಸೇರಿದ್ದು;

ಆ) ಸರ್ಕಾರದ್ದಾಗಿದ್ದರೆ ಮಾರಾಟ ಮಾಡಲಾಗಿದೆಯೇ, ಅಥವಾ ಲೀಜಿಗೆ ನೀಡಲಾಗಿದೆಯೇ;

ಇ) ರೇಸ್ ಕೋರ್ಸ್‌ನಿಂದ ರಸ್ತೆ ಸಂಚಾರಕ್ಕೆ ದಕ್ಕೆಯಾಗಿಲ್ಲವೆ;

ಈ) ಹಾಗಿದ್ದಲ್ಲಿ, ಈ ಬಗೆ ಪೊಲೀಸರ ಅಭಿಪ್ರಾಯವೇನು;

ಉ) ರೇಸ್ ಕೋರ್ಸ್ (ಕುದುರೆ ಜೂಜು) ಪರವಾನಿಗೆಯನ್ನು ರದ್ದುಪಡಿಸಲು ಸರ್ಕಾರವೇನಾದರೂ ಯೋಚಿಸಿದೆಯೇ ಹಾಗೂ ರೇಸ್ ಕೋರ್ಸ್ ಆಡಳಿತ ಮಂಡಳಿಯ ಪಟ್ಟಿ, ವಿಸ್ತೀರ್ಣ ಹಾಗೂ ಲೀಜ್‌ಗೆ ಕೊಟ್ಟ ಅವಧಿಯ ವಿವರಗಳನ್ನು ಒದಗಿಸುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು) :

ಅ) ರೇಸ್ ಕೋರ್ಸ್ ಜಮೀನು ಕರ್ನಾಟಕ ಸರ್ಕಾರದ ಸ್ವತ್ತಾಗಿರುತ್ತದೆ.

ಆ) ಸದರಿ ಜಮೀನನ್ನು ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ.

ಇ) ರೇಸ್ ಕೋರ್ಸ್‌ನಲ್ಲಿ ರೇಸ್ ಮುಕ್ತಾಯವಾಗುವ ಸಮಯದಲ್ಲಿ ಅದಕ್ಕೆ ಹೊಂದಿಕೊಂಡಿರುವ ರಸ್ತೆಗಳಲ್ಲಿ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುತ್ತದೆ. ಅಂತಹ ಸಂದರ್ಭಗಳಲ್ಲಿ ಸದರಿ ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಚಾರಿ ಪೊಲೀಸರನ್ನು ನೇಮಕ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

ಈ) ರೇಸ್ ಕೋರ್ಸ್‌ನ್ನು ನಗರ ಪ್ರದೇಶದಿಂದ ಹೊರಗಡೆಗೆ ಸ್ಥಳಾಂತರಿಸುವುದು ಸೂಕ್ತವಾಗಿರುತ್ತದೆಂಬುದ ಪೊಲೀಸರ ಅಭಿಪ್ರಾಯವಾಗಿರುತ್ತದೆ.

ಉ) ರೇಸ್ ಕೋರ್ಸ್ ಪರವಾನಗಿಯನ್ನು ರದ್ದು ಪಡಿಸುವ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ. ರೇಸ್ ಕೋರ್ಸ್ ಆಡಳಿತ ಮಂಡಳಿಯ ಪಟ್ಟಿಯನ್ನು ಅನುಬಂಧ–I ರಲ್ಲಿ ಇಡಲಾಗಿದೆ.

ರೇಸ್ ಕೋರ್ಸ್ ಜಮೀನಿನ ವಿಸ್ತೀರ್ಣವು 67 ಎಕರೆ 25 ಗುಂಟೆ ಇದ್ದು, ಸದರಿ ಜಮೀನನ್ನು ದಿನಾಂಕ : 1.1.81 ರಿಂದ 30 ವರ್ಷದ ಅವಧಿವರೆಗೆ ಲೀಸ್ ನೀಡಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂ: ಪಿಡಬ್ಲ್ಯೂಡಿ 86 ಬಿಎಂಎಸ್ 98 ದಿನಾಂಕ 5.9.2000ರಲ್ಲಿ ಲೀಸ್ ಮೊತ್ತವನ್ನು ಪರಿಷ್ಕರಿಸಿ ಅವಧಿಯನ್ನು 20 ವರ್ಷಗಳಿಗೆ ಅಂದರೆ ದಿನಾಂಕ 1.1.89 ರಿಂದ 31.12.2009ರವರೆಗೆ ಪುನರ್ ನಿಗಧಿಪಡಿಸಲಾಗಿದೆ.

ಶ್ರೀ ಹೆಚ್. ಆಂಜನೇಯ : ಬೆಂಗಳೂರಿನ ಹೃದಯ ಕೇಂದ್ರದಲ್ಲಿ ಒಂದು ಕುದುರೆ ಜೂಜು ಆಡತಕ್ಕಂಥ ರೇಸ್ ಕೋರ್ಸ್ ಅನ್ನು ಇಡಲಾಗಿದೆ. ಆ ರೇಸ್ ಕೋರ್ಸ್ ಅಲ್ಲಿರುವುದರಿಂದ ಸುತ್ತಮುತ್ತ ಸಂಚಾರಕ್ಕೆ ವಿಪರೀತ ಅಡಚಣೆಯಾಗುತ್ತಿದೆ. ರೇಸ್ ಕೋರ್ಸ್ ಅನ್ನು ಸ್ಥಳಾಂತರಿಸಬೇಕೆಂದು ಹೇಳಿ ಹಿಂದೆ ಬೇಕಾದಷ್ಟು ಸಾರಿ ಈ ಸದನದಲ್ಲಿ ಚರ್ಚೆಯೂ ಕೂಡ ಆಗಿದೆ. ಅದಕ್ಕೆ ಬೇಕಾದಂಥ ಪರ್ಯಾಯವಾದಂಥ ಜಾಗವನ್ನೂ ಕೂಡ ಕೊಡಲಾಗಿದೆ. ಆದರೂ ಕೂಡ ಅವರು ಅಲ್ಲಿಗೆ ಸ್ಥಳಾಂತರಗೊಂಡಿಲ್ಲ. ಯಾವ ಪುರುಷಾರ್ಥಕ್ಕೋಸ್ಕರ, ಯಾವ ಜನರ ಕಲ್ಯಾಣಕ್ಕೋಸ್ಕರ ಬೆಂಗಳೂರಿನ ಹೃದಯ ಭಾಗದಲ್ಲಿ ಕುದುರೆ ಜೂಜು ಕೇಂದ್ರವನ್ನು ಇಡಲಾಗಿದೆ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಅದನ್ನು ಕೂಡಲೇ ಸ್ಥಳಾಂತರ ಮಾಡಬೇಕು. ಇಲ್ಲ, ಆ ಕುದುರೆ ಜೂಜನ್ನು ರದ್ದುಪಡಿಸಿಬಿಟ್ಟರೆ ಎಷ್ಟೋ ಬಡವರ, ಹಾಗೂ ಹೆಣ್ಣು ಮಕ್ಕಳ ಮಾಂಗಲ್ಯನಾದರೂ ಕೂಡ ಉಳಿಯುತ್ತದೆ. ಆದುದರಿಂದ, ಆ ಜೂಜು ಕೇಂದ್ರದಿಂದ ಯಾವುದೇ ದೇಶದ ಕಲ್ಯಾಣವಾಗಲಿ, ಸಮಾಜದ ಕಲ್ಯಾಣವಾಗಲಿ, ದುರ್ಬಲ ಕಲ್ಯಾಣವಾಗಲಿ ಆಗುವುದಿಲ್ಲ. ಈ ಸಮಾಜವನ್ನು ಹಾಳು ಮಾಡುವುದಕ್ಕೋಸ್ಕರ ಸ್ಥಾಪನೆಯಾಗಿರತಕ್ಕಂಥ ಈ ಕುದುರೆ ಜೂಜು ಕೇಂದ್ರವನ್ನು ಕೂಡಲೇ ರದ್ದುಪಡಿಸಬೇಕು. ಇಲ್ಲ, ಅದನ್ನು ಸ್ಥಳಾಂತರ ಮಾಡಲಿಕ್ಕೆ ಕ್ರಮ ಕೈಗೊಳ್ಳಬೇಕು. ಸ್ಥಳಾಂತರ ಮಾಡಿಯಾದ ಮೇಲೆ, ಆ ಜಾಗ ಏನಿದೆ, 67 ಎಕರೆ ಪ್ರದೇಶ ಏನಿದೆ.....

ಅಧ್ಯಕ್ಷರು : ಅಲ್ಲಿ ಸದಸ್ಯರು ಏಕೆ ಗುಂಪು ಕಟ್ಟಿಕೊಂಡಿದ್ದೀರಿ; ಒಂದು ಕಡೆ ಕುಳಿತುಕೊಳ್ಳಿ ದಯಮಾಡಿ.

ಶ್ರೀ ಹೆಚ್. ಆಂಜನೇಯ : ಅದು 67 ಎಕರೆ ಪ್ರದೇಶವಿದೆ. ಅದನ್ನು ಸ್ಥಳಾಂತರ ಮಾಡಿದರೆ, ಅಲ್ಲಿ ನಮ್ಮ ಕರ್ನಾಟಕ ಸರ್ಕಾರದ ಸಚಿವರೆಲ್ಲರಿಗೂ ವಸತಿ ಗೃಹದಳವನ್ನು ನಿರ್ಮಾಣ ಮಾಡಬಹುದು ಅಗ ಎಲ್ಲಾ ಸಚಿವರೂ ಒಂದೇ ಕಡೆ ಸಿಗುತ್ತಾರೆ. ಇದು ಸಾರ್ವಜನಿಕರಿಗೆ ಮತ್ತು ನಾಡಿನ ಎಲ್ಲಾ ಜನರಿಗೂ ಕೂಡ ಮಾನ್ಯ ಸಚಿವರನ್ನು ಭೇಟಿ ಮಾಡಲಿಕ್ಕೆ ಮತ್ತು ಅವರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಅದು ಒಂದು ಸಹಕಾರಿಯಾಗುತ್ತದೆ. ಆದ್ದರಿಂದ ರೇಸ್ ಕೋರ್ಸ್ ಅನ್ನು ಸ್ಥಳಾಂತರ ಮಾಡಲಿಕ್ಕೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಈಗಿರುವ ಲೀಸ್ ಪೀರಿಯಡ್ ಏನಿದೆ, ಅದು 2009ರವರೆಗೂ ಸಹ ಇದೆ. ಲೀಸ್ ಪೀರಿಯಡ್ ಅನ್ನು ಎಕ್ಸ್‌ಟೆಂಡ್ ಮಾಡಿದ್ದಾರೆ. 30 ವರ್ಷ ಇದ್ದದ್ದನ್ನು 10 ವರ್ಷ ಕಡಿಮೆ ಮಾಡಿ 20 ವರ್ಷಕ್ಕೆ ಲೀಸ್ ಮಾಡಿದ್ದಾರೆ. 2009ರವರೆಗೂ ಸಹ ಈ ಲೀಸ್ ಪೀರಿಯಡ್ ಕಂಟಿನ್ಯೂ ಆಗುತ್ತದೆ. ಮುಂದೇನು ಮಾಡಬೇಕೆನ್ನತಕ್ಕಂಥದ್ದನ್ನು ತಾವು ಕೊಟ್ಟಿರತಕ್ಕಂಥ ಸಲಹೆ ಹಿನ್ನಲೆಯಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಈ ರೇಸ್ ಕೋರ್ಸ್ ಲೀಸ್ ಬಗ್ಗೆ ಎರಡು ಆದೇಶಗಳನ್ನು ಹೊರಡಿಸಿದ್ದೀರಿ. ಸಾಮಾನ್ಯ ಜನರ ಮನಸ್ಸಿನಲ್ಲಿ ಆ ರೇಸ್ ಕೋರ್ಸ್ ಅನ್ನು ನಡೆಸುತ್ತಿರುವವರಿಗೆ ಅನುಕೂಲ ಮಾಡಿಕೊಡುವ ಒಂದು ಹುನ್ನಾರ ನಡೆದಿದೆ ಅನ್ನುವಂಥ ಭಾವನೆ ಮೂಡುತ್ತಿದೆ. ಈಗಾಗಲೇ ಬಹುತೇಕ ಇದನ್ನು ಯಲಹಂಕಕ್ಕೆ ಬದಲಾಯಿಸಬೇಕು ಎನ್ನುವಂಥ

ಚಿಂತನೆ ನಡೆದಿರುವಂಥ ಈ ಸಂದರ್ಭದಲ್ಲಿ ಆ ಲೀಸ್ ಪೀರಿಯಡ್ ಮುಂಚೆಯೇ, ಅಲ್ಲಿಯವರೆಗೂ ಕಾಯಬೇಕು ಅಂತೇನೂ ಇಲ್ಲ ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ, ಒಂದು ಪ್ರಮುಖವಾದ ಸ್ಥಳದಲ್ಲಿ ಇದು ಇರುವುದನ್ನು ಬೇರೆ ಕಡೆಗೆ ಷಿಫ್ಟ್ ಮಾಡಬೇಕೆನ್ನುವ ನಿರ್ಧಾರ ಮಾಡಿದ್ದರೆ, ತಾವು ಎರಡು ಆದೇಶ ಹೊರಡಿಸುವ ಅಗತ್ಯವೇನಿತ್ತು? ಮೀನಾ–ಮೇಷ ಏಕೆ ಮಾಡುತ್ತಿದ್ದೀರಿ? ತತ್‌ಕ್ಷಣ, ಸರ್ಕಾರ ಇದಕ್ಕೆ ಬದ್ಧರಾಗಿದ್ದೀರಾ? ರೇಸ್ ಕೋರ್ಸ್ ಷಿಫ್ಟ್ ಆಗುತ್ತದೆ. ಷಿಫ್ಟ್ ಆಗೋದಿದ್ದರೆ, ಎಲ್ಲಿಗೆ ಷಿಫ್ಟ್ ಆಗುತ್ತದೆ? ಎರಡು ಆಜ್ಞೆ ಹೊರಡಿಸುವುದಕ್ಕೆ ಕಾರಣವೇನು? ಇದೇನೋ ರೇಸ್ ಕೋರ್ಸ್ ನಡೆಸುವವರ ಪರವಾಗಿದೆ ಎನ್ನುವಂಥ ಭಾವನೆ ಮೂಡುವುದಕ್ಕೆ ಇದು ಅವಕಾಶವಾಗುವುದಿಲ್ಲವೇ? ಇದರ ಬಗ್ಗೆ ನಾನು ಸ್ಪಷ್ಟೀಕರಣ ಕೇಳುತ್ತೇನೆ.

ಆಂಜನೇಯ : ಎರಡನೇ ಅವಧಿಗೆ ವಿಸ್ತರಣೆ ಮಾಡಿದ್ದಾರೆ. ಅದರ ಅವಧಿ ಇವತ್ತು ಮುಗಿದು ಹೋಗಿದೆ. ಏನು ಆ ರೇಸ್ ಕೋರ್ಸ್ ಅನ್ನು ನಡೆಸುತ್ತಿದ್ದಾರಲ್ಲಾ, ಜೂಜುಕೋರರು, ಅದರ ಪ್ರಮುಖರು ಏನಿದ್ದಾರೆ, ಅವರು ಬಹಳ ಪ್ರಭಾವಿಗಳು. ಸರ್ಕಾರದ ಮೇಲೆ ಒತ್ತಡ ಹಾಕಿ ಮತ್ತೊಂದು ಅವಧಿಗೆ ವಿಸ್ತರಣೆ ಮಾಡಿಕೊಂಡಿದ್ದಾರೆ. ಇದರಲ್ಲಿ ಎರಡು ಇದೆ. ಅವರ ಅವಧಿ ಮುಗಿದಾದಮೇಲೆ ಮತ್ತೊಂದು ಸಾರಿ ಅವರ ಅವಧಿಯನ್ನು ವಿಸ್ತರಣೆ ಮಾಡಿದ್ದಾರೆ. ದಯವಿಟ್ಟು, ಆ ಅವಧಿಯನ್ನು ರದ್ದುಪಡಿಸಿ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಹೊಸದಾಗಿ ಸಮ್ಮಿಶ್ರ ಸರ್ಕಾರ ರಚನೆಯಾದ ಮೇಲೆ ಈ ರೀತಿಯ ಆಜ್ಞೆಗಳನ್ನು ಹೊರಡಿಸಿಲ್ಲ ಎನ್ನತಕ್ಕಂಥದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇದು ಈ ಹಿಂದೆ ಆಗಿರತಕ್ಕಂಥ ಒಂದು ನಿರ್ಧಾರ ಮತ್ತು ಲೀಸ್ ಪೀರಿಯಡ್ 2009ರವರೆಗೂ ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಯಡಿಯೂರಪ್ಪನವರು ಹಾಗೂ ಆಂಜನೇಯರವರು ಕೊಟ್ಟಿರತಕ್ಕಂಥ ಸಲಹೆಯ ಆಧಾರದ ಮೇಲೆ ನಾನು ದಿಢೀರನೆ ಒಂದು ಉತ್ತರವನ್ನು ಕೊಡಲಿಕ್ಕಾಗುವುದಿಲ್ಲ. ಆದ್ದರಿಂದ, ನಾನು ಸಚಿವ–ಸಂಪುಟದಲ್ಲಿ ನೀವು ಕೊಟ್ಟಿರತಕ್ಕಂಥ ವಿಚಾರವನ್ನೂ ಸಹಿತ, ಸಲಹೆಯನ್ನು ಸಹಿತ ಚರ್ಚೆ ಮಾಡುತ್ತೇನೆ.

ಇ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು (ಮುಂದು)

ಆಫಜಲ್‌ಪುರ ತಾಲ್ಲೂಕಿನ ಹೊನ್ನೂರ ಗ್ರಾಮವನ್ನು ಕಂದಾಯ ಗ್ರಾಮವಾಗಿ ಮಾಡುವುದು.

625(6565) ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ್) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಆಫಜಲಪುರ ತಾಲ್ಲೂಕಿನ ಹೊನ್ನೂರು ಗ್ರಾಮವು ಮಣ್ಣೂರ ಕಂದಾಯ ಗ್ರಾಮದಲ್ಲಿ ಇರುವುದು ನಿಜವೇ;

ಆ) ಹೊನ್ನೂರು ಗ್ರಾಮವು ಮಣ್ಣೂರಿಂದ ಎಷ್ಟು ಕಿ.ಮೀ. ಅಂತರದಲ್ಲಿದೆ;

ಇ) ಮಣ್ಣೂರು ಹೊನ್ನೂರು ಮಧ್ಯದಲ್ಲಿರುವ ಉಪ್ಪಾರವಾಡಿ ಗ್ರಾಮವನ್ನು ಶಿವಾಜಿನಗರ ಕಂದಾಯ ಗ್ರಾಮವನ್ನಾಗಿ ಮಾಡಿರುವುದು ನಿಜವೇ;

ಈ) ಹಾಗಿದ್ದಲ್ಲಿ ಹೊನ್ನೂರು ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಮಾಡದಿರಲು ಕಾರಣವೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಆಫಜಲಪುರ ತಾಲ್ಲೂಕಿನಲ್ಲಿ ಹೊನ್ನೂರು ಎಂಬ ಗ್ರಾಮವು ಅಸ್ಥಿತ್ವದಲ್ಲಿರುವುದಿಲ್ಲ. ಹೊಸೂರುವಾಡಿ ಎಂಬ ಚಿಕ್ಕ ಗ್ರಾಮವಿದ್ದು, ಈ ಗ್ರಾಮವು ಮಣ್ಣೂರು ಕಂದಾಯ ಗ್ರಾಮದ ವ್ಯಾಪ್ತಿಗೆ ಬರುತ್ತದೆ.